


ಫೇಸ್‌ಬುಕ್ ಅನ್ನೋದು ಒಂತರಾ ಇಪ್ಪತ್ನಾಲ್ಕು ಗಂಟೇನೂ ತೆರೆದಿರೋ ಮಾಲ್ ಇದ್ದ ಹಾಗೆ. ಯಾರು ಯಾವಾಗ ಬೇಕಾದ್ರೂ ಎಂಟ್ರಿ ಕೊಡಬಹುದು, ಎಕ್ಸಿಟ್ ಆಗಬಹುದು. ಅದನ್ನ ಬೇರೆಯವರು ಪ್ರಶ್ನೆ ಮಾಡೋ ಹಾಗಿಲ್ಲ. ಜನ ಮಾಲ್‌ಗಳಿಗೆ ಯಾಕೆ ಹೋಗ್ತಾರೆ ಹೇಳು? ಕೆಲವರು ಶಾಪಿಂಗ್ ಮಾಡಲು, ಇನ್ನು ಕೆಲವರು ವಿಂಡೋ ಶಾಪಿಂಗ್ ಮಾಡುತ್ತಾ ಟೈಂ ಪಾಸ್ ಮಾಡಲು, ಇನ್ನೂ ಕೆಲವರು ಸುಮ್ಮನೆ ಅಲ್ಲಿ ಲ್ಲಿ ಅಡ್ಡಾಡುತ್ತಾ ಹೋಗೋರ್ನ ಬರೋರ್ನ ನೋಡ್ತಾ ಮಜಾ ತಗೋಳಕ್ಕೂ ಹೋಗ್ತಾರೆ. ಹಾಗೆ ಈ ಫೇಸ್‌ಬುಕ್ ಕೂಡ. ಏನೂ ಮಾಡಕ್ಕೆ ಆಗಲ್ಲ. ನೆಗ್ಲೆಕ್ಟ್ ಮಾಡಿಬಿಡು. ಅವರಷ್ಟಕ್ಕೆ ಅವರೆ ಸುಮ್ಮನಾಗ್ತಾರೆ'' ಎಂದು ಸಮಾಧಾನ ಹೇಳಿದ್ದ. ಏನೇ ನಿರ್ಲಕ್ಷ್ಯ ಮಾಡಬೇಕೆನಿಸಿದರೂ ಕೆಲವೊಮ್ಮೆ ತಾನು ಅಮೆರಿಕದಲ್ಲಿ ಸೆಟಲ್ ಆಗಿರುವ ಅಣ್ಣನ ಪರಿವಾರದೊಡನೆ ಸರಿರಾತ್ರಿಯಲ್ಲಿ ಚಾಟ್ ಮಾಡುವಾಗ ಹಾಯ್, ಏನ್ ಮಾಡ್ತಾ ಇದ್ದೀರಿ ಎಂದು ಬರುವ ಕೆಲವು ಮೆಸೇಜುಗಳಲ್ಲಿ ವಿಕ್ರಮ್ ಎನ್ನುವ ಹೆಸರಿನವ ಕಳಿಸಿದ ಮೆಸೇಜುಗಳೇ ಬಹಳ ಇರುವುದನ್ನ ಗಮನಿಸಿ ಅವನ ಪ್ರೊಫೈಲ್ ನೋಡಿಳು. ಮೂವತ್ತರ ವಯಸ್ಸಿನ ಎಮ್‌ಎನ್‌ಸಿಯೊಂದರಲ್ಲಿ ಎಂಜಿನಿಯರಾಗಿದ್ದ ಆಕರ್ಷಕ ನಗೆ ಮೊಗದ ಫೋಟೊದೊಂದಿಗೆ ಸಿಂಗಲ್, ಗೆಳೆತನ ಹಾಬಿ ಎಂದೆಲ್ಲಾ ಅವನು ಹಾಕಿಕೊಂಡಿದ್ದ. ಓಹ್ ಇವನ್ಯಾವನೋ ತನಗಿಂತ ಬಹಳ ಚಿಕ್ಕವನು. ಹೆಚ್ಚೆಂದರೆ ಮಗ ಅವಿನಾಶನಿಗಿಂತ ಎರಡು ವರ್ಷ ದೊಡ್ಡವನಷ್ಟೆ ಎಂದು ಅದೇ ಸಲಿಗೆಯಿಂದ,

"ನೋ ಲೇಟ್ ನೈಟ್ ಮೆಸೇಜಸ್ ಪ್ಲೀಸ್ ವಿಕ್ರಮ್. ರಿಯಲಿ ಇಟ್ ಇರ್ರಿಟೇಟ್ಸ್ ಮಿ" ಎಂದು ಒಮ್ಮೆ ಉತ್ತರಿಸಿದಾಗ, "ಓಹ್ ಸಾರಿ ಮ್ಯಾಡಮ್, ಬಟ್ ವಾಟ್ ಆರ್ ಯು ಡೂಯಿಂಗ್ ಅಟ್ ದಿಸ್ ಆಡ್ ಅವರ್? ನೀವು ಆನ್ ಲೈನಿನಲ್ಲಿ ಇದ್ದೀರೆಂದ ಮೇಲೆ ಚಾಟ್ ಮಾಡುವುದಕ್ಕಾಗೇ ಎಂದು ಭಾವಿಸುವುದರಲ್ಲೇನು ತಪ್ಪಿದೆ?" ಎಂದು ಮೆಸೇಜ್ ಮಾಡಿದ. ಪ್ರಣತಿಗೆ ಸಿಟ್ಟು ಬಂದರೂ, ''ನಾನು